# ಹರಪನಹಳ್ಳಿ ಹುಡುಗಿಗೆ ಪೌರಾಣಿಕ ಪಾತ್ರದ ಆಸೆ

**ಕಿರುತೆರೆಯ ಮೆಟ್ಟಿಲ ಮೇಲೆ ಗಟ್ಟಿ ಹೆಜ್ಜೆ ಊರುತ್ತಿರುವಾಗಲೇ ಹಿರಿತೆರೆಯ ಪಡಸಾಲೆಗೆ ಪ್ರವೇಶ ಪಡೆದುಕೊಂಡ ಹುಡುಗಿ ಕಾವ್ಯಾ ರಮೇಶ್.**

■ ಪದ್ಮನಾಭ ಭಟ್



ಹರಪನಹಳ್ಳಿಯ ಆ ಹುಡುಗಿ ಅಂದು ಬೆಂಗಳೂರಿಗೆ ಬಂದಿಳಿದಿದ್ದು ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆದುಕೊಳ್ಳುವುದಕ್ಕಾಗಿ. ಆದರೆ ಬದುಕು ಅವರನ್ನು ನಟನೆಯ ಜೀವನಶಾಲೆಗೆ ಪ್ರವೇಶ ಕೊಟ್ಟಿತು. ಅಂದಹಾಗೆ ಆ ಹುಡುಗಿಯ ಹೆಸರು ಕಾವ್ಯಾ ರಮೇಶ್. ಇಷ್ಟು ಹೇಳಿದರೆ ತಿಳಿಯಲಿಕ್ಕಿಲ್ಲ, ಕಲರ್ಸ್ ಕನ್ನಡದ 'ಸೀತಾ ವಲ್ಲಭ' ಧಾರಾವಾಹಿಯ ಅದಿತಿ ಎಂದು ಹೇಳಿದರೆ ಥಟ್ಟನೇ ಹೊಳೆಯುತ್ತದೆ.

ಕಾವ್ಯಾಗೆ ತಾನು ನಟಿಯಾಗಬೇಕು ಎಂಬ ಕನಸೇನೂ ಇರಲಿಲ್ಲ. ಆದರೆ ಅವರ ಅಮ್ಮನ ಮನದ ಆಳದಲ್ಲಿ ಮಗಳನ್ನು ತೆರೆಯ ಮೇಲೆ ನೋಡಬೇಕು ಎಂಬ ಬಯಕೆ ಇತ್ತು. ಕಾಲೇಜಿಗೆ ಅಡ್ಮಿಷನ್ ಮಾಡಲಿಕ್ಕೆಂದು ಬೆಂಗಳೂರಿಗೆ ಬಂದಿದ್ದಾಗ ಟೀವಿಯಲ್ಲಿ ಕಾಣಿಸಿದ 'ಆಡಿಷನ್ ಕರೆ'ಯನ್ನು ನೋಡಿ 'ಒಂದ್ಸಲ ಹೋಗಿ ಟ್ರೈ ಮಾಡು' ಎಂದು ಮಗಳನ್ನು ಒತ್ತಾಯಿಸಿದ್ದೂ ಅವರೇ. ಹೀಗೆ 'ಏನಾಗತ್ತೋ ಆಗ್ಲಿ' ಎಂದು ತುಸು ಉದಾಸೀನದಿಂದಲೇ ಹೋಗಿದ್ದ ಆಡಿಷನ್‌ನಲ್ಲಿ ಕಾವ್ಯಾ ಅವರ ಊಹೆಗೂ ಮೀರಿ ಆಯ್ಕೆಯಾಗಿಬಿಟ್ಟರು. ಹೀಗೆ 'ಕಲರ್ಸ್ ಸೂಪರ್' ವಾಹಿನಿಯ 'ಮಾಂಗಲ್ಯಂ ತಂತು ನಾನೇನ' ಧಾರಾವಾಹಿಯಲ್ಲಿ ಅನಿಕಾ ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದ್ದು. ನಂತರ 'ಸೀತಾ ವಲ್ಲಭ'ದಲ್ಲಿ ಅವಕಾಶ ಸಿಕ್ಕ ಮೇಲೆ ಎರಡೂ ಧಾರಾವಾಹಿಗಳಿಗೆ ಡೇಟ್ ಹೊಂದಿಸಲು ಸಾಧ್ಯವಾಗದೆ 'ಮಾಂಗಲ್ಯಂ ತಂತು ನಾನೇನ' ಧಾರಾವಾಹಿಯಲ್ಲಿ ನಟಿಸುವುದನ್ನು ಬಿಡಬೇಕಾಯ್ತು.

'ಸೀತಾ ವಲ್ಲಭ', ಕಾವ್ಯಾ ಪಾಲಿಗೆ ಅದೃಷ್ಟದ ದಿಡ್ಡಿಬಾಗಿಲು ತೆರೆದ ಧಾರಾವಾಹಿ. ಕನ್ನಡ ಚಿತ್ರರಂಗದವರ ಕಣ್ಣು 'ಅದಿತಿ'ಯೆಂಬ ಪೆದ್ದು ಮುದ್ದು ಪಾತ್ರದಲ್ಲಿ ನಟಿಸುತ್ತಿದ್ದ ಈ ಹುಡುಗಿಯ ಮೇಲೆ ಬೀಳಲು ಜಾಸ್ತಿ ಸಮಯವೇನೂ ತೆಗೆದುಕೊಳ್ಳಲಿಲ್ಲ.

ಧಾರಾವಾಹಿಯಲ್ಲಿ ಮುಳುಗಿಹೋಗಿದ್ದಾಗಲೇ ವಿಕ್ರಂ ಸೂರಿ ತಮ್ಮ 'ಚೌಕಾಬಾರಾ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸುವಂತೆ ಕರೆದಾಗ ಕಾವ್ಯಾಗೆ ಅಚ್ಚರಿಯೇ ಆಯಿತು. ಇಷ್ಟು ಬೇಗ ಬೆಳ್ಳಿತೆರೆಯ ತೇರನ್ನೇರುವ ಅವಕಾಶ ಸಿಗುತ್ತದೆ ಎಂದು ಅವರು ಅಂದುಕೊಂಡಿರಲಿಲ್ಲ. ಅಚ್ಚರಿಯ ಜೊತೆಗೆ ಕೊಂಚ ಭಯವೂ ಇತ್ತು. ಯಾಕೆಂದರೆ ಧಾರಾವಾಹಿಯಲ್ಲಿ ನಟಿಸುತ್ತಿದ್ದ ಪಾತ್ರಕ್ಕಿಂತ ಪೂರ್ತಿ ವಿರುದ್ಧ ರೀತಿಯ ಪಾತ್ರದಲ್ಲಿ ಅವರು ನಟಿಸಬೇಕಿತ್ತು. 'ಅದಿತಿ' ಚಟಪಟ ಮಾತಾಡುವ, ಮಾತಾಡುತ್ತಲೇ ಎಲ್ಲರ ಮನಗೆಲ್ಲುವ ಚಕೋರಿಯಾಗಿದ್ದರೆ, 'ಚೌಕಾಬಾರಾ'ದ ನಾಯಕಿ ಗಂಭೀರೆ. ಸಾಂಪ್ರದಾಯಿಕ ಲುಕ್‌ನ ಪ್ರಬುದ್ಧ ಪಾತ್ರಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವುದನ್ನು ಸವಾಲಾಗೇ ಸ್ವೀಕರಿಸಿ ನಟಿಸಿದರು.

ಈ ಚಿತ್ರದಲ್ಲಿ ನಟಿಸುತ್ತಿದ್ದಾಗಲೇ ಅವರಿಗೆ 'ಗುಲ್ಟು' ನಾಯಕ ನವೀನ್ ಶಂಕರ್ ಅವರ ಇನ್ನೂ ಹೆಸರಿಡದ ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದೆ. ಈ ಚಿತ್ರದಲ್ಲಿ ಪಕ್ಕಾ ಟಾಮ್ ಬಾಯ್ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಕಾವ್ಯಾಗೆ ಮೆಡಿಕಲ್ ಓದಬೇಕು ಎಂಬ ಆಸೆಯಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಮನಸಲ್ಲಿದ್ದ ಈ ಕೊರಗನ್ನು ನೀಗಿಸಿಕೊಳ್ಳಲೂ ಅವರಿಗೆ ಬಣ್ಣದ ಲೋಕ ಬಹುಬೇಗ ಅನುವು ಮಾಡಿಕೊಟ್ಟಿದೆ. ಅವರು ನಾಯಕಿಯಾಗಿ ನಟಿಸುತ್ತಿರುವ 'ಡಿಸೆಂಬರ್ 24' ಚಿತ್ರದಲ್ಲಿ ಮೆಡಿಕಲ್ ವಿದ್ಯಾರ್ಥಿನಿಯಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ.

ಹೀಗೆ ಅತಿ ಕಡಿಮೆ ಅವಧಿಯಲ್ಲಿಯೇ ಮೂರು ಸಿನಿಮಾಗಳಲ್ಲಿ ಭಿನ್ನ ಪಾತ್ರಗಳಲ್ಲಿ ನಟಿಸಲು ಅವಕಾಶ ಸಿಕ್ಕ ಹಿತವಾದ ಆಘಾತದಿಂದ ಕಾವ್ಯಾ ಇನ್ನೂ ಪೂರ್ತಿ ಚೇತರಿಸಿಕೊಂಡಿಲ್ಲ. 'ಎಷ್ಟು ಜನರಿಗೆ ಇಷ್ಟು ಬೇಗ ಇಷ್ಟೊಂದು ಅವಕಾಶಗಳು ಸಿಗುತ್ತವೆ' ಎಂದು ಉದ್ಗರಿಸುತ್ತಲೇ ಅವರು ತಮ್ಮ ಬಣ್ಣದ ಬದುಕಿನ ನಾಳೆಯ ಬಗ್ಗೆ ಇನ್ನಷ್ಟು ವಿಶ್ವಾಸ ಮನದುಂಬಿಕೊಳ್ಳುತ್ತಾರೆ.

ಮನಸಿಗೊಗ್ಗದ ಎಂಜಿನಿಯರಿಂಗ್‌ಗೆ ಬಾಯ್ ಬಾಯ್ ಹೇಳಿರುವ ಕಾವ್ಯಾ, ಬಿ.ಎಸ್‌ಸಿ. ಅಂತಿಮ ವರ್ಷದಲ್ಲಿ ಓದುತ್ತಿದ್ದಾರೆ.

'ಮಾಮೂಲಿ ಲವ್ ಸ್ಟೋರಿಗಿಂತ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು. ಸಾಧ್ಯವಾದರೆ ಒಮ್ಮೆಯಾದರೂ ಪೌರಾಣಿಕ ಸಿನಿಮಾದಲ್ಲಿ ನಟಿಸಬೇಕು' ಎಂದು ತಮ್ಮ ಆಸೆಯನ್ನು ಹಂಚಿಕೊಳ್ಳುವ ಕಾವ್ಯಾ, ಚಂದನವನದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯುವ ಪ್ರತಿಭೆಯನ್ನಂತೂ ಹೊಂದಿದ್ದಾರೆ.

ಚಿತ್ರ: ಎಂ.ಎಸ್. ಮಂಜುನಾಥ್